ಬಿಜಾಪುರ ಜಿಲ್ಲೆಯ ಜಗದಾಂಬ ಸಂಸ್ಥೆಯ ಕಾರ್ಯ ವ್ಯಾಪ್ತಿ

೧೫೨೪. ಶ್ರೀ ಮಲ್ಲನಗೌಡ ಪಿರಾದಾರ (ಸಿದಂಗಿ) ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯಲ್ಲಿ ಜಗದಾಂಬ ಸಂಸ್ಥೆಗೆ ಮತ್ತು ಬೇರೆ ಯಾವ ಜಿಲ್ಲೆಗಳಲ್ಲಿ ಪ್ರಾಥಮಿಕ ಶಾಲೆ ಮಾಧ್ಯಮಿಕ ಶಾಲೆ, ಜೂನಿಯರ್ ಕಾಲೇಜ್ ತೆರೆಯಲು ಅನುಮತಿ ನೀಡಲಾಗಿದೆ ಮತ್ತು ಆ ಶಾಲೆಗಳ ಸಂಖ್ಯೆ ಎಷ್ಟು?

ಆ) ಈ ಸಂಸ್ಥೆಯಿಂದ ನಡೆಸಲ್ಪಡುವ ಶಾಲೆಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು ಹಾಗೂ ಶಿಕ್ಷಕರ ಸಂಖ್ಯೆ ಎಷ್ಟು?

ಇ) ಈ ಸಂಸ್ಥೆಗಳು ವ್ಯಾಪಾರಿ ಸಂಸ್ಥೆಯಂತೆ ಕೆಲಸ ನಡೆಸುತ್ತಿರುವುದು ನಿಜವೆ? ಹಾಗೂ 'ರೋಸ್ಟರ್' ನಿಯಮಗಳಿಗೆ ಅನುಗುಣವಾಗಿ ಶಿಕ್ಷಕರ ಹಾಗೂ ಇತರ ನೌಕರರನ್ನು ನೇಮಕ ಮಾಡಲಾಗಿದೆಯೆ?

ಈ) ಮೇಲ್ಕಂಡ ಶಾಲೆಗಳು ನಿಯಮಗಳಿಗನುಸಾರವಾಗಿ ನಡೆಯದಿದ್ದಲ್ಲಿ ಅವುಗಳ ಬಗ್ಗೆ ಕೈಗೊಳ್ಳುವ ಕ್ರಮಗಳೇನು?

ಉ) ಈ ಜಗದಾಂಬ ಸಂಸ್ಥೆಯ ಕಾರ್ಯವ್ಯಾಪ್ತಿ ಎಷ್ಟು ಹಾಗೂ ಅವರ ನೋಂದಾಣಿ ಪ್ರಮಾಣ ಪತ್ರವನ್ನು ಸರಕಾರದವರು ಪರಿಶೀಲಿಸಿದ್ದಾರೆಯೆ?

ಎಂ. ರಘುಪತಿ (ಶಿಕ್ಷಣ ಮಂತ್ರಿಗಳು).—

ಅ) ವಿಜಾಪುರ ಜಿಲ್ಲೆಯಲ್ಲಿನ ಜಗದಾಂಬ ಸಂಸ್ಥೆಗೆ ಈ ಕೆಳಕಂಡ ಜಿಲ್ಲೆಗಳಲ್ಲಿ ಖಾಸಗಿ ಶಾಲೆಗಳನ್ನು ತೆರೆಯಲು ಅನುಮತಿ ನೀಡಲಾಗಿದೆ.—

	ಪ್ರಾಥಮಿಕ ಶಾಲೆ	ಮಾಧ್ಯಮಿಕ ಶಾಲೆ	ಕಿರಿಯ ಕಾಲೇಜು	ಒಟ್ಟು ಸಂಖ್ಯೆ
ಅ) ವಿಜಾಪುರ ಜಿಲ್ಲೆ	೩೧	೩	೦	೩೪
ಆ) ಗುಲ್ಬರ್ಗಾ ಜಿಲ್ಲೆ	೩೩	—	—	೩೩

ವಿಜಾಪುರ ಜಿಲ್ಲೆ

ಅ) ವಿದ್ಯಾರ್ಥಿಗಳ ಸಂಖ್ಯೆ	೩೮೯೫	೪೯೫	—	೪೩೯೦
ಶಿಕ್ಷಕರ ಸಂಖ್ಯೆ	೯೩	೧೮	—	೧೧೧

ಗುಲ್ಬರ್ಗಾ ಜಿಲ್ಲೆ

ವಿದ್ಯಾರ್ಥಿಗಳ ಸಂಖ್ಯೆ	೨೪೦೨	—	—	೨೪೦೨
ಶಿಕ್ಷಕರ ಸಂಖ್ಯೆ	೪೯	—	—	೪೯

ಇ) ಇಲ್ಲ.

ರೋಸ್ಟರ್ ನಿಯಮಗಳನ್ನು ಪಾಲಿಸಿದ್ದಾರೆ.

ಈ) ಅನುದಾನ ಸಂಹಿತೆಯ ನಿಯಮಗಳ ಪ್ರಕಾರ ಕ್ರಮ ತೆಗೆದುಕೊಳ್ಳಲು ಅವಕಾಶವಿದೆ.

ಉ) ಈ ಸಂಸ್ಥೆಯ ಬೈಲಾ (Bye-law) ಪ್ರಕಾರ ಕಾರ್ಯವ್ಯಾಪ್ತಿ ಇಡೀ ಕರ್ನಾಟಕ ರಾಜ್ಯಕ್ಕೆ ಒಳಪಟ್ಟಿರುತ್ತದೆ. ನೋದಂಣಿ ಪ್ರಮಾಣ ಪತ್ರವನ್ನು ಪರಿಶೀಲಿಸಲಾಗಿದೆ.